
ಕಂನಾಡಿಗಾ ನಾರಾಯಣ

## ಪ್ರೊ. ಬಿ.ವಿ. ವೀರಭದ್ರಪ್ಪ

# ಪ್ರಖರ ವೈಚಾರಿಕತೆಯ ಸೌಮ್ಯ ಪ್ರತಿಪಾದಕ



ಇತ್ತೀಚೆಗೆ ನಿಧನರಾದ (ಸೆಪ್ಟೆಂಬರ್ 21, 2017) ಚಿಂತಕ ಬಿ.ವಿ. ವೀರಭದ್ರಪ್ಪ ಅವರ ಕುರಿತಾದ ನುಡಿನೋಟ...

ತೊಂಬತ್ತರ ದಶಕದಲ್ಲಿ ಉದ್ಯೋಗ ನಿಮಿತ್ತ ನಾನು ದಾವಣಗೆರೆಗೆ ಕಾಲಿಟ್ಟಾಗ ಯಾವುದೇ ಸಾಹಿತ್ಯಕ ಕಾರ್ಯಕ್ರಮವಿರಲಿ, ಅಲ್ಲಿನ ವೇದಿಕೆಗಳಲ್ಲೆಲ್ಲ ಬಿ.ವಿ. ವೀರಭದ್ರಪ್ಪ, ಎಂ.ಜಿ. ಈಶ್ವರಪ್ಪ, ಎಸ್.ಎಚ್. ಪಟೇಲ್ ಇವರೇ ರಾರಾಜಿಸುತ್ತಿದ್ದರು. ಆಗಿನ್ನೂ ಕಣ್ಣು ಬಿಡುತ್ತಿದ್ದ ನಮ್ಮ ಕಣ್ಣಿಗೆ ಇವರು ಅತಿರಥ ಮಹಾರಥರಂತೆ ಕಾಣುತ್ತಿದ್ದರು. ಅವರನ್ನು ತಲುಪುವುದು, ಅವರಿಗೆ ನಮ್ಮ ಪರಿಚಯ ಮಾಡಿಕೊಳ್ಳುವುದೇ ಅಸಾಧ್ಯವೆಂಬಷ್ಟು ಎತ್ತರದಲ್ಲಿ ಕಾಣುತ್ತಿದ್ದರು..

ಚಳ್ಳಕೆರೆ ತಾಲ್ಲೂಕಿನ ಘಟಪರ್ತಿಯವರಾದ ಪ್ರೊ. ಬಿ.ವಿ. ವೀರಭದ್ರಪ್ಪನವರು, 33 ವರ್ಷಗಳ ಕಾಲ ಬಾಪೂಜಿ ವಿದ್ಯಾಸಂಸ್ಥೆಯ ವಿವಿಧ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸಾವಿರಾರು ಶಿಷ್ಯರನ್ನು ಸಂಪಾದಿಸಿದ್ದರು. ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಪ್ರತಿಮಾ ಸಭಾದ ಸಂಚಾಲಕರಲ್ಲಿ ಒಬ್ಬರಾಗಿ ಜೆ.ಪಿ. ಚಳವಳಿ, ಗೋಕಾಕ್ ಚಳವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಬಳ್ಳಾರಿ ಜೈಲಿನ ಕಂಬಿಗಳನ್ನೂ ಎಣಿಸಿಬಂದಿದ್ದರು.

ಪ್ರೊ.ಬಿ.ವಿ.ವೀ. ಅವರದು ಜನಪ್ರಿಯವಲ್ಲದ, ಆದರೆ ಕೇಳುಗರನ್ನು ಆಕರ್ಷಿಸುವಂಥ ವಿಚಾರ ಮಂಡನಾ ಶೈಲಿ. ಅತ್ಯಂತ ಪ್ರಖರ ವಿಚಾರಗಳನ್ನು ಸಹ ಅತ್ಯಂತ ಸರಳವಾಗಿ, ಅಷ್ಟೇ ಮೆಲುದನಿಯಲ್ಲಿ ಹೇಳುತ್ತಿದ್ದರು. ಸಣ್ಣಸಣ್ಣ ವಿಚಾರಗಳನ್ನೂ ಸಹ ಉಗ್ರವಾಗಿ ಭಾಷಣ ಬಿಗಿಯುವ